ಸಿಸಿ ನಂ. 26/2023 ಪಿಡಬ್ಲೂ :1

ದಿನಾಂಕಃ 13-09-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

ಫಿರ್ಯಾದುದಾರರ ಪ್ರಮಾಣೀಕೃತ ಹೇಳಿಕೆಯನ್ನು ಮುಖ್ಯ ವಿಚಾರಣೆ ಎಂದು ಹಾಗೂ ಸದರಿ ಫಿರ್ಯಾದುದಾರರನ್ನು ಪಿಡಬ್ಲ್ಯೂ-1 ಎಂದು ಪರಗಣಿಸಲಾಗಿದೆ .

**ಮುಂದುವರೆದ ಮುಖ್ಯ ವಿಚಾರಣೆಃ ಪಿರ್ಯಾದುದಾರರ ಪರವಾಗಿಃ ಶ್ರೀ ವಾಯ್ ವಿ ಎಸ್ ವಕೀಲರಿಂದಃ**

3. ನಾನು ಯುನಿಯನ್ ಬ್ಯಾಂಕ್ ಆಪ್ ಇಂಡಿಯಾ ಕುಮಟಾ ಶಾಖೆಯವರು ನಾನು ಬಂಗಾರದ ಆಭರಣಗಳನ್ನು ಅಡವಿಟ್ಟು ಸಾಲವನ್ನು ಪಡೆದುಕೊಂಡಿರುವ ಬಗ್ಗೆ ಕೊಟ್ಟಿರುವ ಎರಡು ರಸೀದಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ -10 ಮತ್ತು 11 ಎಂದು ಗುರುತಿಸಲಾಯಿತು . ನಿಪಿ-10 ಮತ್ತು 11ರ ಯಥಾ ನಕಲುಗಳನ್ನು ಈಗಾಗಲೇ ನಿಪಿ -6 ಮತ್ತು 7 ಎಂದು ಗುರುತಿಸಲಾಗಿದೆ . ನಿಪಿ-6 ರಲ್ಲಿ ಸಾಲ ಚುಕ್ತಾ ಆಗಿರುವ ಬಗ್ಗೆ ಹಾಕಿರುವ ಎರಡು ಅಡ್ಡ ಗೆರೆಗಳು ಇರುವುದಿಲ್ಲ . ಸದರಿ ದಾಖಲೆ ನಿಶಾನೆಯಾಗಿ ಗುರುತಿಸಿದ ನಂತರ ಸದರಿ ಸಾಲವನ್ನು ನಾನು ಚುಕ್ತಾ ಮಾಡಿರುವುದರಿಂದ ನಿಪಿ-10ರಲ್ಲಿ ಸಾಲ ಚುಕ್ತಾ ಆಗಿರುವ ಬಗ್ಗೆ ಎರಡು ಅಡ್ಡ ಗೆರೆಯನ್ನು ಹಾಕಿರುತ್ತಾರೆ . ನಿಪಿ-10 ಮತ್ತು 11 ರ ಹಿಂದಿನ ಪುಟಗಳಲ್ಲಿ ನಾನು ಅಡವಿಟ್ಟಿರುವ ಬಂಗಾರದ ಆಭರಣಗಳು ಹಾಗೂ ಅವುಗಳ ತೂಕವನ್ನು ಬರೆಯಲಾಗಿದೆ .

( ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.